<u>3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೋಲಾರ (ಕೆಜಿಎಫ್ ಪೀಠ)</u>

<u>ಎಸ್.ಸಿ. ಸಂಖ್ಯೆ: 94/2025</u>

**CW**–05

**PW**–22

| | |
|---|---|
| | ಸಾಕ್ಷಿಯನ್ನು ದಿ:07.04.2026 ರಂದು ಕರೆಸಿ ಪ್ರಮಾಣೀಕರಿಸಲಾಯಿತು. |
| ಸಾಕ್ಷಿಯ ಹೆಸರು | ಅಭಿ |
| ತಂದೆಯ ಹೆಸರು | ಚಿನ್ನಪ್ಪಯ್ಯ |
| ವಯಸ್ಸು | 15 ವರ್ಷ |
| ಉದ್ಯೋಗ | ವಿದ್ಯಾರ್ಥಿ |
| ವಾಸಸ್ಥಳ | ಕದಿರೇಗೌಡನ ಕೋಟೆ |

<u>( ಸಾಕ್ಷಿಯು ಅಪ್ರಾಪ್ತ ವಯಸ್ಕನಾಗಿದ್ದು ನ್ಯಾಯಾಲಯವು ಕೆಲವು ಪ್ರಾಥಮಿಕ ಪ್ರಶ್ನೆಗಳನ್ನು ಕೇಳಿದ್ದು ಸಾಕ್ಷಿಯು ಸಮರ್ಪಕವಾಗಿ ಉತ್ತರ ನೀಡಿದ್ದು ಸಾಕ್ಷ್ಯನುಡಿಯಲು ಸಾಮರ್ಥ ಹೊಂದಿದ್ದಾನೆ ಎಂದು ಪರಿಗಣಿಸಿ ಸಾಕ್ಷ್ಯನುಡಿಯಲು ಅನುಮತಿಯನ್ನು ನೀಡಲಾಯಿತು. )</u>

<u>ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರವರಿಂದ:–</u>

ನನಗೆ ಚಾಸಾ–1 ರವರು ಗೊತ್ತು. ಅದೇ ರೀತಿ ಮೃತ ತ್ರಿವೇಣಿ ಮತ್ತು ಅಕೆಯ ಮೃತ ಮಕ್ಕಳಾದ ಮೌನಿಷ ಮತ್ತು ನಿತೀನ್ ರವರು ಸಹ ಗೊತ್ತು. ಆದರೆ ತ್ರಿವೇಣಿ ಮತ್ತು ಅಕೆಯ ಇಬ್ಬರು ಮಕ್ಕಳು ಯಾವ ರೀತಿ ಮರಣ ಹೊಂದಿದ್ದಾರೆ ಎಂದು ನನಗೆ ಗೊತ್ತಿಲ್ಲ. ನನಗೆ ವಿಷಯ ತಿಳಿದ ನಂತರ ನಾನು ಸಹ ತ್ರಿವೇಣಿ ರವರ ಮನೆಯ ಹತ್ತಿರ ನೋಡಲು ಹೋಗಿದ್ದೆನು. ನಾನು ಹೋಗಿ ನೋಡಲಾಗಿ ತ್ರಿವೇಣಿಯ ಮೃತದೇಹವನ್ನು ನೆಲದ ಮೇಲೆ ಹಾಗೂ ಇಬ್ಬರ ಮಕ್ಕಳ ಮೃತದೇಹಗಳನ್ನು ಮಂಚದ ಮೇಲೆ ಮಲಗಿಸಲಾಗಿತ್ತು. ನಂತರ ಅಲ್ಲಿಂದ ನಾನು ಮನೆಗೆ ವಾಪಸ್ಸು ಹೊರಟುಹೋದೆನು. ತ್ರಿವೇಣಿ ಮತ್ತು ಆಕೆಯ ಗಂಡ ಮಣಿ ರವರ ನಡುವೆ ಸಂಸಾರದ ವಿಚಾರದಲ್ಲಿ ಗಲಾಟೆಯಾಗಿದ್ದ ಬಗ್ಗೆ ನನಗೆ ಗೊತ್ತಿಲ್ಲ.

**ಪಾಟೀ ಸವಾಲುಃ ಅರೋಪಿ ಪರ ಶ್ರೀ ಕೆ ಅರ್ ವಿ ವಕೀಲರಿಂದಃ–**

ನಾನು ತ್ರಿವೇಣಿಯ ಮನೆಯ ಬಳಿ ಹೋಗಿರಲಿಲ್ಲ ಮತ್ತು ಯಾವುದೇ ಮೃತದೇಹಗಳನ್ನು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಯಾವ ಕಾರಣಕ್ಕಾಗಿ ಮತ್ತು ಯಾವ ರೀತಿ ಮೃತಪಟ್ಟಿದ್ದರು ಎಂದು ನನಗೆ ಗೊತ್ತಿಲ್ಲ.

**ಮರುವಿಚಾರಣೆಃ ಇಲ್ಲ**

**ಸಾಕ್ಷಿಯ ಹೇಳಿಕೆಯ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ,

Sd/–

(ಶಿವಕುಮಾರ.ಬಿ)

3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಕೋಲಾರ ಕೆ.ಜಿ.ಎಫ್(ಪೀಠ)